

# ಗಿನ್ನೆಸ್ ಪೊದೆ



ಸ್ಕಾಟ್‌ಲ್ಯಾಂಡ್ ದೇಶದ ಪರ್ತ್ ನಗರದಿಂದ ಸುಮಾರು 18 ಕಿಲೋಮೀಟರ್ ದೂರದಲ್ಲಿ ದಟ್ಟವಾದ ಯುರೋಪಿಯನ್ ಬೀಚ್ (ಹೊಂಗೆ ಮರ) ಮರಗಳ ಪೊದೆ ಇದೆ. ಇದು ಅಂತಿಂಥ ಪೊದೆಯಲ್ಲ. ಇದು ಸರಾಸರಿ 30 ಮೀಟರ್‌ಗಳಷ್ಟು ಎತ್ತರವಿದ್ದು, ಪ್ರಪಂಚದಲ್ಲೇ ಅತ್ಯಂತ ಎತ್ತರವಾದ ಪೊದೆ ಎಂದು ಗಿನ್ನೆಸ್ ದಾಖಲೆ ಪಡೆದಿದೆ. ಅಷ್ಟೇ ಅಲ್ಲ ಸುಮಾರು ಅರ್ಧ ಕಿಲೋಮೀಟರ್‌ಗಳಿಗಿಂತಲೂ ಹೆಚ್ಚು ಉದ್ದವಿರುವ ಈ ಪೊದೆ ಪ್ರಪಂಚದಲ್ಲೇ ಅತ್ಯಂತ ಉದ್ದನೆಯ ಪೊದೆ ಎಂಬ ಹೆಗ್ಗಳಿಕೆಯನ್ನೂ ತನ್ನದಾಗಿಸಿಕೊಂಡಿದೆ.

ಮೆಕ್ಲಿಯೌರ್ ಹೌಸ್ ನ ಎಸ್ಟೇಟ್‌ನಲ್ಲಿ 1745 ರಲ್ಲಿ ರಾಬರ್ಟ್ ಮರ್ರೆ ನೈನರ್ ಹಾಗೂ ಜೀನ್ ಮರ್ಸಿಕ್ ಎಂಬ ದಂಪತಿ ಮೊದಲು ಇಲ್ಲಿ ಗಿಡಗಳನ್ನು ನೆಟ್ಟಿದ್ದರು. ಪೊದೆಯ ಪಶ್ಚಿಮ ಭಾಗದಿಂದ ಅರ್ಧ ಕಿಲೋಮೀಟರ್ ದೂರದಲ್ಲಿ ಮೆಕ್ಲಿಯೌರ್ ಹೌಸ್ ಇದೆ. ಇದೇ ಪೊದೆಯ ಪೂರ್ವದ ಗಡಿಯೂ ಕೂಡಾ ಆಗಿದೆ. ಕಲ್ಲೊಡೆನ್ ಯುದ್ಧದಲ್ಲಿ ರಾಬರ್ಟ್ ಮರ್ರೆ ಮೃತಪಟ್ಟನಂತೆ. ಇದರಿಂದ ದುಃಖಿತಳಾದ ಪತ್ನಿ, ಹೊಸದಾಗಿ ನೆಟ್ಟಿರುವ ಗಿಡಗಳನ್ನು ತೀರಿಕೊಂಡಿರುವ ಪತಿಯ ನೆನಪಿಗಾಗಿ, ಆಗಸದಷ್ಟು ಎತ್ತರಕ್ಕೆ ಬೆಳೆಸಬೇಕೆಂದು ತೀರ್ಮಾನಿಸಿದಳಂತೆ.

ಮೆಕ್ಲಿಯೌರ್ ಹೌಸ್ ಈಗ ಬಾಡಿಗೆಯ ವಿಲ್ಲಾ ಆಗಿ ಮಾರ್ಪಟ್ಟಿದೆ ಮತ್ತು ಮೆಕ್ಲಿಯೌರ್ ಟ್ರಸ್ಟ್ ಪೊದೆಯ ನಿರ್ವಹಣೆ ಮಾಡುತ್ತಿದೆ. ಪ್ರತೀ 10 ವರ್ಷಕ್ಕೊಮ್ಮೆ ಹೈಡ್ರಾಲಿಕ್ ಲಿಫ್ಟ್ ಸಹಾಯದಿಂದ ನಾಲ್ಕು ಜನರ ಗುಂಪು ಈ ಪೊದೆಯನ್ನು ಟ್ರಿಮ್ ಮಾಡುತ್ತದೆ. ಈ ಟ್ರಿಮ್ಮಿಂಗ್ ಕೆಲಸ ಮುಗಿಯಲು ಆರು ವಾರ ಬೇಕಾಗುತ್ತದೆ. ವರ್ಷವಿಡೀ ಯಾತ್ರಿಕರು ಈ ಪೊದೆಯನ್ನು ವೀಕ್ಷಿಸಬಹುದಾಗಿದೆ.

■ **ವಿನಯ್ ಕುಮಾರ್ ಬಿ.ಹೆಚ್.**